ಬಂದ್ರೆ ಸಂಘ ಕೆಟ್ಟುಹೋಗುತ್ತೆ' ಅಂತ ಯಾಕೆ ಅನಿಸತ್ತೆ? ಈ ಪ್ರಶ್ನೆಗಳಿಗೆ ಉತ್ತರ ಇಲ್ಲ, ಆದರೆ ಪ್ರಶ್ನೆಗಳಿವೆ.

◆ ಸ್ತ್ರೀವಾದದ ಈಗಿನ ಪರಿಸ್ಥಿತಿ ಹೇಗಿದೆ?

ನನಗೆ ಆಮೆ ಮತ್ತು ಮೊಲದ ಕಥೆ ಯಾವತ್ತೂ ನೆನಪಿಗೆ ಬರುತ್ತೆ. ಸ್ತ್ರೀವಾದವನ್ನು ವಾರೆನೋಟದಿಂದ, ಕಡೆಗಣ್ಣಿನಿಂದ ಪಕ್ಕಕ್ಕೆ ಸರಿಸುತ್ತಿದ್ದ ಕಾವೂ ಇತ್ತು. ಆದರೆ ಇಂದು ಸ್ತ್ರೀವಾದವೇ ಈ ಜಗತ್ತಿನ ಆಯ್ಕೆ ಆಗಿದೆ. ನನಗೆ ಗೊತ್ತಿಲ್ಲ, ಸ್ತ್ರೀವಾದವನ್ನೂ ಮುಂದೆ ಬೇರೆ ಹೆಸರಿನಿಂದ ಕರೆಯಬಹುದು. ಸ್ತ್ರೀವಾದವನ್ನು ಮಾನವತಾವಾದ ಎಂದು ಕರೆದರೆ ನಾನು ನನ್ನ ಮೊದಲ ಓಟನ್ನು ಅದಕ್ಕೆ ಹಾಕುವೆ. ಯಾಕೆಂದರೆ ಸ್ತ್ರೀವಾದವು ಯಾರನ್ನೂ ದ್ವೇಷಿಸದ, ಯುದ್ಧ, ಸ್ಪರ್ಧೆ ಇದಾವುದನ್ನು ತಿಳಿಯದ ಒಂದು ಅಂತಃಕರಣದ ಚಲನೆ ಅದು. ಬಹಳ ಭಾವುಕವಾಗಿ ನನ್ನ ಮಾತುಗಳು ಕೇಳಿಸುತ್ತಾ ಇರಬಹುದು. ಇವತ್ತಿನ ಈ ದಳ್ಳುರಿಯ ಪರಿಸ್ಥಿತಿಯಲ್ಲಿ ಸ್ತ್ರೀವಾದ ಮಾತ್ರವೇ ಎಲ್ಲವನ್ನೂ ಶಕ್ತವಾಗಿ ನಿಭಾಯಿಸುತ್ತೆ. ನಾನು ಮೊದಲಿಗೆ ಹೇಳಿದಂತೆ ಇದನ್ನು ನಾವು ಆಮೆ ಎಂದು ತಿಳಿದು ಹಿಂದಕ್ಕೆ ತಳ್ತಾ ಇದ್ದರೂ, ಇದು ಮುಂದಕ್ಕೆ ಬರಲು ಸಾಧ್ಯವೇ ಇಲ್ಲ ಎಂದು ತಿಳಿದವರೂ ಇದ್ದರು. ಆದರೆ ಆಮೆ ಎಷ್ಟು ಸ್ಪಷ್ಟತೆಯಲ್ಲಿ, ಎಂಥ ಆತ್ಮವಿಶ್ವಾಸದಲ್ಲಿ ಮುನ್ನಡೆಯಿತೋ ಸ್ತ್ರೀವಾದ ಹಾಗೆ ಮುನ್ನಡೆಯುತ್ತಾ ಇದೆ. ಅದೊಂದು ಜೀವಂತವಾದ ಪ್ರಕ್ರಿಯೆ. ಅದು ಹಾಗಿಲ್ಲದೆ ಹೋಗಿದ್ದರೆ ಯಾರೂ ಅದಕ್ಕೆ ಪ್ರತಿಕ್ರಿಯಿಸುತ್ತಿರಲಿಲ್ಲ. ನನಗೆ ಸ್ತ್ರೀವಾದ ಅನ್ನೋದು; ಬೇಡ ಬೇಡ ಎಂದು ಮತ್ತೆ ಮತ್ತೆ ಅದುಮುತ್ತಿದ್ದರೂ, ಪುಟಿಪುಟಿದು ಬರುವ ಚೆಂಡಿನಂತೆ ಕಾಣುತ್ತದೆ.

◆ ಸಿಮೋನ್ ದ ಬುವಾ ಹೇಳ್ತಾಳಲ್ಲಾ, 'ಸಂಘಟನೆಯ ಕೊರತೆಯಿಂದಲೇ ಮಹಿಳೆಯರು ಯಥಾಸ್ಥಿತಿ ವಾದಕ್ಕೆ ಸಂದಿರುವುದು' ಅಂತ. ಆದ್ರೆ, ಈ ಹೊತ್ತಲ್ಲಿ ನೋಡಿದ್ರೆ ಎಷ್ಟೊಂದು ಹೆಣ್ಣು ಮಕ್ಕಳು ಬೀದಿಗೆ ಬಂದು ಸಂಘಟಿತರಾಗಿ ಹೋರಾಟ ಮಾಡ್ತಾ ಇದಾರೆ, ಬರಹಗಾರ್ತಿಯರು ಮತ್ತು ಹೋರಾಟಗಾರ್ತಿಯರು ಇಬ್ಬರನ್ನು ಒಂದಾಗಿ ಬೆಸೆಯುವ ಕೊಂಡಿ ಯಾವುದು?

ಅದು ನನ್ನ ಕನಸು, ಅಂದ್ರೆ ಆ ಕೊಂಡಿ ಯಾವುದು ಅನ್ನೋದನ್ನು ನಾನು ಹುಡುಕ್ತಾ ಇದೀನಿ. ಅದು ಸಿಕ್ಕಿ ಬಿಟ್ರೆ ಮಾತ್ರ ಅದೊಂದು ವಿಸ್ಮಯಕಾರಿಯಾದ ಬೆಳವಣಿಗೆಗೆ ಕಾರಣ ಆಗುತ್ತೆ ಅಂತ ಅನಿಸತ್ತೆ. ನಮ್ಮೆಲ್ಲರ ಕನಸು ನನಸಾಗೋದಕ್ಕೆ ಇದೊಂದು ಬಹಳ ಅದ್ಭುತವಾದ ದಾರಿ. ಆದರೆ ಅದು ಸುಲಭದ ದಾರಿ ಅಲ್ಲ. ಏಕೆ ಅಂದ್ರೆ ಮೇಲ್ನೋಟಕ್ಕೆ ಅವು ಎರಡೂ ಭಿನ್ನ ದಾರಿಗಳ ಹಾಗೆ, ಸಮಾನಾಂತರ ದಾರಿಗಳ ಹಾಗೆ ಕಾಣಿಸುತ್ತಿದ್ದರೂ ಅದರ ಆಳದಲ್ಲಿ ಎರಡೂ ಬೆಸೆದುಕೊಂಡಿವೆ, ಆಳದಲ್ಲಿ ಅವುಗಳ ಬೆಸುಗೆ ಇದೆಯಲ್ಲಾ, ಆ ಬೆಸುಗೆಯನ್ನು ಅಧಿಕೃತವಾಗಿ ಜೋಡಿಸಿಕೊಳ್ಳೋದಕ್ಕೆ ಸಾಧ್ಯ ಆಗುವುದಾದರೆ ಅದು ಅದ್ಭುತ. ಅದಕ್ಕೆ ಬೇಕಾಗಿರುವ ತಿಳಿವಳಿಕೆ ಯಾವುದು ಅಂದರೆ ಹೆಣ್ಣಿನ ಹೋರಾಟವನ್ನ ನಾವು ರಾಜಕೀಯ ಹೋರಾಟ ಅಂತ ಬಹಳ ಸ್ಪಷ್ಟತೆಯಲ್ಲಿ ಮುನ್ನಡೆಸಬೇಕು. ನಾವು ಅದನ್ನು ಒಂದು ಸಾಮಾಜಿಕ ಹೋರಾಟ ಅಂತ ತಿಳ್ಕೊಂಡಿರೋದೆ ನಾವೇ ಅದಕ್ಕೆ ಹಾಕಿಕೊಂಡಿರುವ ಬೇಲಿ ಅಂತ ಅನಿಸತ್ತೆ. ಅಧಿಕೃತತೆಗಾಗಿ ನಡೆಸುವ ಹೋರಾಟವನ್ನೂ ನಾವು ರಾಜಕೀಯ ಹೋರಾಟ ಅಂತ ಕರೀಬಹುದಾದ್ರೆ, ಆ ಅರ್ಥದಲ್ಲಿ ಇದನ್ನೊಂದು ರಾಜಕೀಯ ಹೋರಾಟವಾಗಿ ನಾವು ಅದನ್ನು ಮುನ್ನಡೆಸಬೇಕು ಮತ್ತು ಇದರಲ್ಲಿ ಗಂಡಸರು ಸಮಪಾಲುದಾರರಾದಾಗ ಮಾತ್ರ ಅದಕ್ಕೊಂದು ನಿಜವಾದ ಅರ್ಥವಂತಿಕೆ ಬರುತ್ತದೆ.